ಡಿ.ಕೃಷ್ಣಮೂರ್ತಿ, ಡಾ. ಕೆ. ಶಿವರಾಮ ಕಾರಂತ ಮುಂತಾದ ಮಹನೀಯರು ಈ ದೃಷ್ಟಿಯಲ್ಲಿ ಕೆಲಸಮಾಡಿದರು.

ಕೃಷಿಪ್ರಧಾನ ಭಾರತ ಕೂಡ ಕಾಲಕ್ರಮೇಣ ಕೃಷಿಯನ್ನು ಕಡೆಗಣಿಸಿ ಕೈಗಾರಿಕೆಯನ್ನು ಅಪ್ಪಿಕೊಂಡಿತು. ನಗರೀಕರಣದ ಅನಿವಾರ್ಯತೆಯಿಂದಾಗಿ ಶಿಶುವಿಹಾರ, ನರ್ಸರಿಶಾಲೆ ಮತ್ತು ಅಂಗನವಾಡಿಗಳು ತಲೆದೋರಿದವು. ಶಿಶುಶಿಕ್ಷಣ ವ್ಯಾಪಾರೀಕರಣಕ್ಕೆ ಒಳಗಾಯಿತು. ಮಕ್ಕಳ ಎಳೆಯ ಮನಸ್ಸುಗಳ ಮೇಲೆ ಇಂಗ್ಲಿಷ್ ಕಲಿಸುವ, ಅದರಲ್ಲೇ ಮಾತಾಡಿಸುವ ದಬ್ಬಾಳಿಕೆ ಮಾಡಲಾಯಿತು. ಹಳ್ಳಿಗಳಲ್ಲೂ ಕನ್ನಡ ಮಾಧ್ಯಮ ಕೈತಪ್ಪಿ ಹೋಗುವುದಕ್ಕೆ ಕಾರಣ, ಎಲ್ಲವನ್ನೂ ಇಂಗ್ಲಿಷ್‌ನಲ್ಲಿಯೇ ಕಲಿಸಹೊರಟಿರುವ ಈ ನರ್ಸರಿ ಶಾಲೆಗಳೇ! ಈ ನರ್ಸರಿ ಶಾಲೆಗಳಿಂದ ಪ್ರಿ–ನರ್ಸರಿ, ಎಲ್.ಕೆ.ಜಿ. ಯು.ಕೆ.ಜಿ. ಪಾಸಾದ ಮಗು ಹೋಗುವುದಾದರೂ ಎಲ್ಲಿಗೆ? ಖಂಡಿತವಾಗಿಯೂ ಕಾನ್ವೆಂಟ್ ಶಾಲೆಗಳಿಗೆ. ನರ್ಸರಿ ಶಾಲೆಗಳು ಕಾನ್ವೆಂಟ್‌ಗಳಲ್ಲಿ ಸೀಟು ಸಿಗುತ್ತದೆಂದು ಆಮಿಷ ತೋರಿಸಿ, ಡೊನೇಷನ್ ಎಂದು ಸಾವಿರಾರು ರೂಪಾಯಿಗಳನ್ನು ವಸೂಲು ಮಾಡುತ್ತಿವೆ. ಸರಕಾರದ ಯಾವುದೇ ನಿಯಂತ್ರಣ ಇಲ್ಲಿಲ್ಲ.

**ಅಂಗಾಂಗಗಳ ಚಟುವಟಿಕೆಯ ತರಬೇತಿಯ ಶಿಕ್ಷಣ, ಆಟಗಳ ಮೂಲಕ ಮಗು ತನಗೆ ತಾನೇ ಕಲಿತುಕೊಳ್ಳುವುದು, ಬಲವಂತವಾದ ಹೇರಿಕೆಯಿಲ್ಲದೆ ಮಗುವಿನಲ್ಲಿ ಸ್ವಂತವಾಗಿ ಬೆಳೆಯುವ ಆಂತರಿಕ ಶಿಸ್ತು** – ಇವನ್ನೆಲ್ಲ ಪ್ರಾಯೋಗಿಕವಾಗಿ ತೋರಿಸಿಕೊಟ್ಟ ಮರಿಯಾ ಮಾಂಟೆಸರಿ, ಈಗಿನ ನರ್ಸರಿಶಾಲೆಗಳನ್ನು ನೋಡಿದ್ದರೆ, ಆರು ವರ್ಷದವರೆಗೆ ಮಕ್ಕಳು ಮನೆಯಲ್ಲಿ ಸ್ವತಂತ್ರರಾಗಿದ್ದ ಹಿಂದಿನ ಕಾಲವೇ ಸರಿ ಎನ್ನುತ್ತಿದ್ದರೇನೋ! ಬುದ್ಧಿ ಮೂಡದ ಚಿಕ್ಕ ವಯಸ್ಸಿನಲ್ಲೇ ದಬ್ಬಾಳಿಕೆಗೆ ಒಳಗಾಗುವ ಮಗು, ತನ್ನ ಈ ದುರ್ಭರ ಅವಸ್ಥೆಗೆ ಕಾರಣರಾದ ಹಿರಿಯರನ್ನು ದ್ವೇಷಿಸದೆ ಇರಲು ಸಾಧ್ಯವೇ?

ಮರಿಯಾ ಮಾಂಟೆಸರಿಯವರಿಗೆ ಕೊನೆಗಾಲದಲ್ಲಿ ಅನೇಕ ಪ್ರಶಸ್ತಿಗಳು ಸಿಕ್ಕವು. ಯುನೆಸ್ಕೋವಿನ ಪುರಸ್ಕಾರದ ಜೊತೆಗೆ, ಫ್ರಾನ್ಸ್, ಸ್ವೀಡನ್, ಹಾಲೆಂಡ್ ದೇಶಗಳೂ ಅವರನ್ನು ಗೌರವಿಸಿ, ಪದವಿ, ಪದಕಗಳನ್ನು ನೀಡಿದುವು. ಹಾಲೆಂಡಿನ ಆಮ್‌ಸ್ಟರ್‌ಡ್ಯಾಂ ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿತು. ಈ ಎಲ್ಲಕ್ಕಿಂತ ಹೆಚ್ಚಿನ ಒಂದು ಪ್ರಶಸ್ತಿಯ ಭಾಗ್ಯ ಅವರಿಗೆ ಒದಗಿ ಬಂದಿತು. ಅದೆಂದರೆ, ಆಕೆಯ ಮಗ ಮಾರಿಯೋ ಕೂಡ ಮಾಂಟೆಸರಿ ವಿಧಾನದಲ್ಲಿಯೇ ಶಿಕ್ಷಣವನ್ನು ಪಡೆದನು. ಈತ ಕೊನೆಯವರೆಗೂ ತಾಯಿಯ ಮೇಲಿನ ಪ್ರೀತಿಯಿಂದ, ಆಕೆಗೆ ಸಹಾಯ ಮಾಡುತ್ತ ಬಂದನು; ತನ್ನ ತಾಯಿಯು ಕೈಗೊಳ್ಳುತ್ತಿದ್ದ ಪ್ರವಾಸಗಳಲ್ಲಿ ಜೊತೆಯಾಗಿ ಇದ್ದು ಅವರ ಕೆಲಸಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದನು. ಅಲ್ಲದೆ ತನ್ನ ತಾಯಿಯ ಮರಣಾನಂತರವೂ, ಅವರ ಘನ ಕಾರ್ಯವನ್ನು ಮುಂದುವರೆಸಿ, ಅವರಿಗೆ ಯೋಗ್ಯ ಉತ್ತರಾಧಿಕಾರಿ ಎನಿಸಿಕೊಂಡನು.

೮೧ರ ಮರಿಯಾ ಇದ್ದಕ್ಕಿದ್ದಂತೆ ೧೯೫೨ರ ಮೇ ೬ ರಂದು, ಹಾಲೆಂಡಿನಲ್ಲಿ ನಿಧನಹೊಂದಿದರು. ಅವರ ಸಮಾಧಿ, ಸ್ಮಾರಕ ಹಾಲೆಂಡಿನ ನೂರ್ಡ್‌ವಿಜ್ (Noordwijk) ನಲ್ಲಿದೆ.


## ಪರಮಹಂಸ ಪ್ರತಿಷ್ಠಾನ

**'ಆಸರೆ', ಅಶಕ್ತ ಹಿರಿಯರ ಮತ್ತು ಅಂಗವಿಕಲರ ಸೇವಾ ಕೇಂದ್ರ**
**ಎಂ.ಐ.ಜಿ 39, 'ಶ್ರೀರಾಮಕೃಷ್ಣ', 2ನೇ ಹಂತ,**
**ಕೆ.ಹೆಚ್.ಬಿ. ಕಾಲೋನಿ, ಗೋಪಾಳ, ಶಿವಮೊಗ್ಗ – 577 205**
**ದೂರವಾಣಿ: 08182–271105**

**ಪರಿಚಯ:** 'ಅಶಕ್ತ ಹಿರಿಯರ ಮತ್ತು ಅಂಗವಿಕಲರ ಆರೈಕೆ' ಆಧುನಿಕ ಸಮಾಜ ಎದುರಿಸುತ್ತಿರುವ ಸಮಸ್ಯೆಗಳಲ್ಲಿ ಒಂದು. ಉತ್ತಮ ವೈದ್ಯಕೀಯ ಸೌಲಭ್ಯಗಳಿಂದಾಗಿ ಹಿರಿಯರು ಮತ್ತು ಅಂಗವಿಕಲರು ಇಂದು ಹೆಚ್ಚು ದಿನ ಬದುಕುತ್ತಿದ್ದಾರೆ. ಇದು ಸಂತೋಷದ ವಿಚಾರವೇನೋ ಹೌದು. ಆದರೆ, ತೀರಾ ಅಶಕ್ತರಾದಾಗ, ಇವರನ್ನು ನಿರಂತರವಾಗಿ ಆರೈಕೆ ಮಾಡುವವರು ಯಾರು? ಗಂಡ, ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗುವ ಈ ದಿನಗಳಲ್ಲಿ ಮನೆಯಲ್ಲಿನ ಹಿರಿಯರ ಮತ್ತು ಅಂಗವಿಕಲರ ಊಟೋಪಚಾರ ಹಾಗೂ ಶುಶ್ರೂಷೆಗಳು ಚಿಂತೆಯನ್ನುಂಟು ಮಾಡುವ ವಿಷಯಗಳು. ಇಂತಹ ಅಶಕ್ತ ಹಿರಿಯರ/ಅಂಗವಿಕಲರ ಸೇವೆಗಾಗಿ ಪ್ರಾರಂಭವಾಗಿದೆ 'ಆಸರೆ'.

### ನಮ್ಮ ವಿಶೇಷತೆಗಳು

* ಮನೆಯ ವಾತಾವರಣ
* ತಜ್ಞ, ಆಪ್ತ ಸಲಹೆಗಾರರಿಂದ ಸಾಂತ್ವನ
* ವೈಚಾರಿಕ, ಧಾರ್ಮಿಕ ಗ್ರಂಥಗಳ ಸಂಗ್ರಹ
* ಆವಶ್ಯಕತೆಗೆ ಅನುಸಾರವಾಗಿ ವೈದ್ಯಕೀಯ ತಪಾಸಣೆ.
* ಸೇವಾಮನೋಭಾವವಿರುವ ಸಿಬ್ಬಂದಿಯಿಂದ ಹಗಲಿರುಳೂ ಶುಶ್ರೂಷೆ.

ಈ ವಿಶಿಷ್ಟ ಸೇವಾಕಾರ್ಯದಲ್ಲಿ ನೀವೂ ಭಾಗಿಗಳಾಗಲು ಬಯಸುವಿರಾ? ಇಲ್ಲಿದೆ ನೋಡಿ, ಅವಕಾಶಗಳು.

ಈಗಿನ್ನೂ ಬೆಳೆಯುತ್ತಿರುವ 'ಪರಮಹಂಸ ಪ್ರತಿಷ್ಠಾನ'ಕ್ಕೆ ನಿಮ್ಮಂತಹ ಸಹೃದಯರ ಸಹಾಯ – ಸಹಕಾರ ಅತ್ಯಗತ್ಯ. ನೀವು ಹಣದ ಮೂಲಕವಷ್ಟೇ ಅಲ್ಲ, ವಿವಿಧ ವಸ್ತುಗಳ ರೂಪದಲ್ಲಿಯೂ ನಮಗೆ ನೆರವಾಗಬಹುದು.

ದಯಮಾಡಿ ಚೆಕ್ / ಡ್ರಾಫ್ಟ್‌ಗಳನ್ನು 'ಪರಮಹಂಸ ಪ್ರತಿಷ್ಠಾನ' ದ ಹೆಸರಿಗೆ ಬರೆಯಿರಿ.

ನೀವು ಆನ್‌ಲೈನ್ ಮೂಲಕವೂ ದೇಣಿಗೆ ಕೊಡಬಹುದು (ಉಳಿತಾಯ ಖಾತೆ ನಂ. 64045823958, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಗೋಪಾಲಗೌಡ ಬಡಾವಣೆ ಶಾಖೆ, ಶಿವಮೊಗ್ಗ IFS CODE – SBMY0040664)

**ಬನ್ನಿ ನಮ್ಮೊಂದಿಗೆ ಕೈ ಜೋಡಿಸಿ.**
**ಈ ಪುಣ್ಯ ಕೆಲಸದಲ್ಲಿ ಸಹಭಾಗಿಗಳಾಗಿ.**



# ಛಾಯಾಚಿತ್ರಗಳಲ್ಲಿ ಸ್ವಾಮಿ ವಿವೇಕಾನಂದರು

ಕೆ.ಆರ್. ಮೋಹನ್

**ಛಾಯಾಚಿತ್ರ – ೨೬**

ಸ್ವಾಮೀಜಿ ಈ ಚಿತ್ರದಲ್ಲಿ ಬರೆದಿರುವ ಒಕ್ಕಣೆ ಹೀಗಿದೆ: **'ಏಕ ಏವ ಸುಹೃದ್ ಧರ್ಮ ನಿಧನೇಽಪ್ಯನುಯಾತಿ ಯಃ'**– "ಧರ್ಮ (virtue) ಎಂಬ ಸ್ನೇಹಿತನೊಬ್ಬನೇ ಮರಣಾನಂತರವೂ ನಮ್ಮನ್ನು ಹಿಂಬಾಲಿಸುತ್ತಾನೆ. ಮಿಕ್ಕದೆಲ್ಲವೂ ಮರಣದಲ್ಲಿ ಪರ್ಯವಸಾನಗೊಳ್ಳುತ್ತದೆ." ಇದನ್ನು ಅವರು ಬಂಗಾಳಿ ಲಿಪಿಯಲ್ಲಿ ಮತ್ತು ಅದರ ಅನುವಾದವನ್ನು ಇಂಗ್ಲೀಷ್‌ನಲ್ಲಿ ಬರೆದು, 'ವಿವೇಕಾನಂದ' ಎಂದು ಸಹಿ ಮಾಡಿದ್ದಾರೆ.

Neely ಎಂಬುವವರು ಬರೆದ, History of Parliament and Religious Congresses at the World's Columbian Exposition' ಎಂಬ ಪುಸ್ತಕವು ೧೮೯೩ರಲ್ಲಿ ಪ್ರಕಟವಾಯಿತು. ಅಲ್ಲಿ 'ಸ್ವಾಮಿ ವಿವೇಕಾನಂದ' ಎಂಬ ಶಿರೋನಾಮೆಯೊಂದಿಗೆ ಈ ಚಿತ್ರ ಮೊದಲು ಮುದ್ರಿತವಾಗಿದೆ. ಒಂದು ಕುತೂಹಲದ ವಿಷಯವೇನೆಂದರೆ ಇದರ ಲೇಖಕರಾದ Neely ಯವರು ತಮ್ಮ ಕೃತಿಯಲ್ಲಿ, ಬೇರೆ ಎಲ್ಲ ಪ್ರತಿನಿಧಿಗಳಿಗಿಂತ, ಸ್ವಾಮೀಜಿಯವರ ಚಿತ್ರಗಳನ್ನೇ ಹೆಚ್ಚಾಗಿ ಪ್ರಕಟಿಸಿದ್ದಾರೆ.



ಚಿತ್ರ : ೨೬

**ಛಾಯಾಚಿತ್ರ – ೨೭**




ಚಿತ್ರ : ೨೭

ಇದು ಹ್ಯಾರಿಸನ್ ಎಂಬ ಛಾಯಾಚಿತ್ರಗ್ರಾಹಕ ತೆಗೆದ, ಸ್ವಾಮಿ ವಿವೇಕಾನಂದರ ಚಿತ್ರಸರಣಿಯಲ್ಲಿ ಎಂಟನೆಯ ಹಾಗೂ ಕೊನೆಯ ಚಿತ್ರ. ಈ ಚಿತ್ರದಲ್ಲಿ ಎದ್ದುತೋರುವ ಸ್ವಾಮೀಜಿಯವರ ಕಣ್ಣುಗಳು ಅವರ ಅತ್ಯುತ್ತಮ ಜ್ಞಾಪಕ ಶಕ್ತಿಯ ಪ್ರತೀಕವಾಗಿವೆ. ಅವರ ಉಪನ್ಯಾಸಗಳಲ್ಲಿ ಕಂಡು ಬರುವ ವಾಗ್ವೈಖರಿಯನ್ನು ಇದು ಬಹುಮಟ್ಟಿಗೆ ವಿವರಿಸುತ್ತದೆ. ಸ್ವಾಮೀಜಿಯ ಹಣೆಯ ಮೇಲ್ಭಾಗ ಅಗಲವಾಗಿದ್ದು, ಅದು ಅವರ ವ್ಯಕ್ತಿತ್ವದ ಮಾಧುರ್ಯ ಹಾಗೂ ಪರಿಪೂರ್ಣತೆಯನ್ನು ಸೂಚಿಸುತ್ತದೆ. ಒಟ್ಟಾರೆ ಇದೊಂದು ಮನಸೆಳೆಯುವ ಚಿತ್ರ.

**ಛಾಯಾಚಿತ್ರ – ೨೮**

ಈ ಸಾಮೂಹಿಕ ಚಿತ್ರ ೧೮೯೩ರ ಸೆಪ್ಟೆಂಬರ್ ೨೭ರ ಸಂಜೆ, ವಿಶ್ವಧರ್ಮ ಸಮ್ಮೇಳನದ ಮುಕ್ತಾಯ ಸಮಾರಂಭದಲ್ಲಿ ತೆಗೆದದ್ದು. ಅಂದಿನ ಸಮಾರಂಭವು ಅತ್ಯಂತ ಉತ್ಸಾಹಪೂರ್ಣ

ಚಿತ್ರ : ೨೮



ವಾತಾವರಣದಿಂದ ಕೂಡಿತ್ತು. ಎರಡು ಮುಖ್ಯ ಸಭಾಂಗಣಗಳಲ್ಲಿ ೭,೦೦೦ಕ್ಕೂ ಹೆಚ್ಚಿನ ಸಭಿಕರು ಕಿಕ್ಕಿರಿದು ಸೇರಿದ್ದರು. ಈ ಅಧಿವೇಶನದಲ್ಲಿ ಹಲವಾರು ದೇಶಗಳಿಂದ ಬಂದಿದ್ದ ಪ್ರತಿನಿಧಿಗಳು ಸಮ್ಮೇಳನದ ಬಗ್ಗೆ ತಮ್ಮ ಅನಿಸಿಕೆಗಳನ್ನು ಮತ್ತು ಆಶೋತ್ತರಗಳನ್ನು ವ್ಯಕ್ತಪಡಿಸಿದರು. ಇದೊಂದು ಅಭೂತಪೂರ್ವ ದೃಶ್ಯವಾಗಿತ್ತು. ಕೊಲಂಬಸ್ ಸಭಾಂಗಣವು ವಿವಿಧ ರೀತಿಯ ದೀಪಗಳಿಂದ ಜಗಜಗಿಸುತ್ತಿತ್ತು. ಸಭಾಂಗಣದ ಒಂದೊಂದು ಇಂಚಿನಷ್ಟು ಜಾಗದಲ್ಲಿಯೂ, ಜನ ನೆರೆದಿದ್ದರು. ವೇದಿಕೆಯಲ್ಲಿ ಹಲವಾರು ದೇಶಗಳ ಬಣ್ಣಬಣ್ಣದ ಬಾವುಟಗಳು ಹಾರಾಡುತ್ತಿದ್ದವು, ಅವು ಎಲ್ಲ ಧರ್ಮಗಳ ಪ್ರತೀಕವಾಗಿದ್ದವು. ವೇದಿಕೆಯ ಮೇಲಿನ ದೃಶ್ಯದ ಎರಡು ಛಾಯಾಚಿತ್ರಗಳನ್ನು ಈ ಸಂದರ್ಭದಲ್ಲಿ ತೆಗೆಯಲಾಯಿತು.

ಅಂದು ಸ್ವಾಮೀಜಿ ಅತ್ಯಂತ ಶ್ರೇಷ್ಠವೂ ಪರಿಣಾಮಕಾರಿಯೂ ಆದ ಭಾಷಣವನ್ನು ಮಾಡಿದರು. ಅದರಲ್ಲಿ ಅವರು ಹೀಗೆ ಸಾರಿದರು: “ಕ್ರೈಸ್ತನಾದವನು ಹಿಂದುವೊ ಬೌದ್ಧನೊ ಆಗಬೇಕಾಗಿಲ್ಲ. ಅಂತೆಯೇ ಹಿಂದುವು ಬೌದ್ಧ ಅಥವಾ ಕ್ರೈಸ್ತನಾಗಬೇಕಿಲ್ಲ. ಆದರೆ ಪ್ರತಿಯೊಬ್ಬನೂ ಉಳಿದವರ ಉನ್ನತ ಭಾವನೆಗಳನ್ನೂ ಮೈಗೂಡಿಸಿಕೊಂಡು, ತನ್ನ ವೈಯಕ್ತಿಕತೆಯನ್ನು ಕಳೆದುಕೊಳ್ಳದೆ, ತನ್ನದೇ ಆದ ಬೆಳವಣಿಗೆಯ ನಿಯಮಾನುಸಾರವಾಗಿ ಅಭಿವೃದ್ಧಿ ಹೊಂದಬೇಕು.” ವೇದಿಕೆಯ ಮೇಲೆ ಎರಡನೇ ಸಾಲಿನಲ್ಲಿ ಎಡಗಡೆ ಕುಳಿತಿರುವವರ ಪೈಕಿ, ಸ್ವಾಮೀಜಿಯವರನ್ನು ಗುರುತಿಸಲಾಗಿದೆ. ಆದರೆ ಅವರೇ ಎಂಬುದು ಖಚಿತವಾಗಿಲ್ಲ.

## ಛಾಯಾಚಿತ್ರ – ೨೯

ಈ ಚಿತ್ರವನ್ನು ಇ. ಬಿ. ಸ್ನೋ ಎಂಬ ಛಾಯಾಗ್ರಾಹಕ ೧೮೯೪ರಲ್ಲಿ ಶಿಕಾಗೊವಿನಲ್ಲಿ ತೆಗೆದು, ಅದರ ಮೇಲೆ ತನ್ನ ಹಕ್ಕನ್ನು ಕಾದಿರಿಸಿದ್ದ. ಈ ಚಿತ್ರದಲ್ಲಿ ಸಂಸ್ಕೃತ ಶ್ಲೋಕವೊಂದನ್ನು ಬಂಗಾಳಿ ಲಿಪಿಯಲ್ಲಿ ಮತ್ತು ಅದರ ಅನುವಾದವನ್ನು ಇಂಗ್ಲಿಷ್‌ನಲ್ಲಿ ಸ್ವಾಮೀಜಿ ಬರೆದಿದ್ದಾರೆ. ಆ ಶ್ಲೋಕ ಮತ್ತು ಅದರ ಅರ್ಥ ಹೀಗಿದೆ: **ಅಜರಾಮರವತ್ ಪ್ರಾಜ್ಞಃ ವಿದ್ಯಾ-ಮರ್ಥಂ ಚ ಸಾಧಯೇತ್ । ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್ ॥**

ಚಿತ್ರ : ೨೯



“ವಿದ್ಯೆಯನ್ನು ಮತ್ತು ಧನವನ್ನು ಗಳಿಸುವಾಗ ತನಗೆ ವ್ಯಾಧಿ ಮತ್ತು ಮರಣ ಇಲ್ಲದ ಹಾಗೆ ಒಬ್ಬನು ಭಾವಿಸಬೇಕು. ಆದರೆ ಧರ್ಮವನ್ನು ಆಚರಿಸುವ ಸಂದರ್ಭದಲ್ಲಿ ಮೃತ್ಯುವು ತನ್ನ ಕೂದಲನ್ನು ಹಿಡಿದುಕೊಂಡ ಹಾಗೆ ಭಾವಿಸಬೇಕು.”